**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**

**. ಪರೀಕ್ಷಾ ತುರ್ತು .**

ಸಂಖ್ಯೆ:ಎ8/ಮಾರ್ಚ್.19ಪ್ರ.ಪ.ಸು./46/2018-19 ದಿನಾಂಕ:14.02.2019

**ಸುತ್ತೋಲೆ**

ವಿಷಯ: 2019ನೇ ಮಾರ್ಚ್/ಏಪ್ರಿಲ್ ತಿಂಗಳಿನಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪ್ರವೇಶ ಪತ್ರ ಪರಿಶೀಲನೆ ಕುರಿತು.

*********

2019ನೇ ಮಾರ್ಚ್/ಏಪ್ರಿಲ್ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಿಮ್ಮ ಶಾಲೆಯಿಂದ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿದೆ. ನಿಮ್ಮ ಶಾಲೆಗೆ ಸಂಬಂಧಪಟ್ಟ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಯ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳುವುದು. ಸದರಿ ಪ್ರವೇಶ ಪತ್ರಗಳಲ್ಲಿ ಯಾವುದೇ ತಪ್ಪುಗಳಿಲ್ಲದಿರುವ ಬಗ್ಗೆ ಈ ಕೆಳಕಂಡ ಅಂಶಗಳಂತೆ ಪರಿಶೀಲಿಸುವುದು. ಒಂದು ವೇಳೆ ಏನಾದರೂ ತಪ್ಪುಗಳು ಕಂಡು ಬಂದಲ್ಲಿ ಕೂಡಲೇ ಮಂಡಳಿಯ ಸಂಬಂಧಿಸಿದ ಶಾಖಾಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಿಕೊಳ್ಳುವುದು.

1. ನಿಮ್ಮ ಶಾಲೆಯಿಂದ CCERF/ CCERR/ CCEPF/ CCEPR/ NSR/ NSPR ವಿದ್ಯಾರ್ಥಿಗಳ ಸಂಖ್ಯೆಗೆ ಅನುಸಾರ ಡೌನ್‌ಲೋಡ್ ಮಾಡಿಕೊಂಡ **ಪ್ರವೇಶ ಪತ್ರಗಳ ಸಂಖ್ಯೆಗಳು ಸರಿ ಹೊಂದುತ್ತಿವೆಯೇ**? ಒಂದು ವೇಳೆ ಸರಿ ಹೊಂದದಿದ್ದಲ್ಲಿ, ಯಾವ ವಿದ್ಯಾರ್ಥಿಯ ಪ್ರವೇಶ ಪತ್ರ ಬಂದಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಅಗತ್ಯ ಕ್ರಮಕ್ಕಾಗಿ ಸಮರ್ಥನೆಯೊಂದಿಗೆ/ ದಾಖಲೆಗಳೊಂದಿಗೆ ಕಳುಹಿಸಿಕೊಡುವುದು.
2. ಒಂದು ವೇಳೆ RF ವಿದ್ಯಾರ್ಥಿ PF ಆಗಿದ್ದು, ಅಥವಾ PF ವಿದ್ಯಾರ್ಥಿ RF ಆಗಿದ್ದು, ಹೀಗೆ ವಿದ್ಯಾರ್ಥಿಯ ವಿಧ ಬದಲಾಗಿದ್ದಲ್ಲಿ ಅಂತಹ **ಪ್ರವೇಶ ಪತ್ರಗಳನ್ನು ಸೂಕ್ತ ಸಮರ್ಥನೆಯೊಂದಿಗೆ ಮಂಡಳಿಗೆ ಕಳುಹಿಸಿಕೊಡುವುದು.**
3. ವಿಶೇಷ ವಿದ್ಯಾರ್ಥಿಗಳಿಗೆ ಉಪನಿರ್ದೇಶಕರ ಜ್ಞಾಪನದನ್ವಯ ಭಾಷಾ ವಿನಾಯಿತಿ, ಬದಲಿ ವಿಷಯಗಳು ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಬಗ್ಗೆ ಮುಖ್ಯಶಿಕ್ಷಕರು ಖಚಿತಪಡಿಸಿಕೊಳ್ಳುವುದು. ಇಲ್ಲವಾದಲ್ಲಿ ಉಪನಿರ್ದೇಶಕರ ಜ್ಞಾಪನದ ಪ್ರತಿಯನ್ನು ದೃಢೀಕರಿಸಿ ಸಮರ್ಥನೆಯೊಂದಿಗೆ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಕಳುಹಿಸಿ ವಿನಾಯಿತಿ ಪಡೆದುಕೊಳ್ಳುವುದು.
4. ಶಾಲಾ ಸಂಕೇತದಲ್ಲಿ ಹಾಗೂ ಶಾಲೆಯ ಹೆಸರಿನಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸೂಕ್ತ ದಾಖಲೆಗಳೊಂದಿಗೆ ಸರಿಪಡಿಸಲು ಮತ್ತು ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ ಮಾಹಿತಿಗೆ **ಶ್ರೀ ಬಿ.ಹೆಚ್.ಶೇಖರಪ್ಪ, ಹಿರಿಯ ಸಹಾಯಕ ನಿರ್ದೇಶಕರು, 'ಸಿ' ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಕಳುಹಿಸಿಕೊಡುವುದು ಹಾಗೂ ದೂರವಾಣಿ ಸಂಖ್ಯೆ 080-23349088 ಸಂಪರ್ಕಿಸಬಹುದು.**
5. ಶಾಲೆಯಿಂದ ಅಪ್‌ಲೋಡ್ ಮಾಡಿರುವಂತೆ ವಿದ್ಯಾರ್ಥಿಗಳ ಭಾವಚಿತ್ರವನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಲಾಗಿದೆ. ವಿದ್ಯಾರ್ಥಿಯ ಭಾವಚಿತ್ರ ಮತ್ತೊಂದು ವಿದ್ಯಾರ್ಥಿಯ ಭಾವಚಿತ್ರದೊಂದಿಗೆ ಅದಲು ಬದಲಾಗಿದ್ದಲ್ಲಿ ಸರಿಯಾದ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ಮುಖ್ಯಶಿಕ್ಷಕರು ದೃಢೀಕರಿಸಿ ಪ್ರವೇಶಪತ್ರವನ್ನು ಮಂಡಳಿಗೆ ಹಿಂದಿರುಗಿಸಿ ಸರಿಪಡಿಸಿಕೊಳ್ಳುವುದು. ಪ್ರವೇಶ ಪತ್ರದಲ್ಲಿ ಹಾಗೂ ಕೇಂದ್ರ ನಾಮಪಟ್ಟಿಯಲ್ಲಿ ಭಾವಚಿತ್ರ ಇಲ್ಲದೇ ಇರುವ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಲಾಗುವುದಿಲ್ಲ. ಇದರಿಂದ ವಿದ್ಯಾರ್ಥಿಗೆ ಆಗುವ ತೊಂದರೆಗೆ ಸಂಬಂಧಿಸಿದ ಶಾಲಾ ಮುಖ್ಯಸ್ಥರೇ ಜವಾಬ್ದಾರರಾಗಿದ್ದು, ಮಂಡಳಿಯು ಇದರ ಜವಾಬ್ದಾರಿ ಹೊರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.
6. ಯಾವುದೇ ವಿದ್ಯಾರ್ಥಿಯ ಭಾವಚಿತ್ರ ಬದಲಾವಣೆಗೆ ಸಂಬಂಧಿಸಿದಂತೆ, ಪರೀಕ್ಷೆಗೆ ಮುಂಚೆ ಮಾಡಲಾದ ಬದಲಾವಣೆಗಳನ್ನು ಮಾತ್ರ ಮಂಡಳಿಯು ಪರಿಗಣಿಸುತ್ತದೆ. ಕೇಂದ್ರ ನಾಮಪಟ್ಟಿಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡದೆ ಇದ್ದಲ್ಲಿ ನಾಮಪಟ್ಟಿಯಲ್ಲಿರುವ ಭಾವಚಿತ್ರದ ವಿದ್ಯಾರ್ಥಿಯೇ ನೈಜ ವಿದ್ಯಾರ್ಥಿ ಎಂದು ಪರಿಗಣಿಸಲಾಗುವುದು. ಪರೀಕ್ಷಾ ನಂತರದಲ್ಲಿ ಬರುವ ವಿದ್ಯಾರ್ಥಿಗಳ ಭಾವಚಿತ್ರ ಬದಲಾವಣೆ ಕುರಿತ ಯಾವುದೇ ಮನವಿಗಳನ್ನು ಮಂಡಳಿ ಪುರಸ್ಕರಿಸುವುದಿಲ್ಲ. ಇದಕ್ಕೆ ಸಂಬಂಧಿಸಿದ ಶಾಲಾ ಮುಖ್ಯಸ್ಥರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರುಗಳು ನೇರಜವಾಬ್ದಾರರಾಗಿರುತ್ತಾರೆ. ಬದಲಿ ವಿದ್ಯಾರ್ಥಿ ಪರೀಕ್ಷೆ ಬರೆಯಲು ಸಹಕರಿಸಿ ಪರೀಕ್ಷಾ ಅವ್ಯವಹಾರದಲ್ಲಿ ಭಾಗಿಯಾಗಿರುತ್ತೀರೆಂದು ಪರಿಗಣಿಸಿ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರ ಮತ್ತು ಶಾಲಾ ಮುಖ್ಯಸ್ಥರ ಮೇಲೆ ಕೆ.ಸಿ.ಎಸ್.(ಸಿ.ಸಿ.ಎ.) ನಿಯಮ-1957 ಮತ್ತು 1983ರ ಕರ್ನಾಟಕ ಶಿಕ್ಷಣ ಕಾಯ್ದೆ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಕಾಯ್ದೆ-1966 ರನ್ವಯ ಕ್ರಮ ಜರುಗಿಸಲಾಗುವುದು.
7. ನೀವು ಅಪ್‌ಲೋಡ್ ಮಾಡಿರುವಂತೆ ವಿದ್ಯಾರ್ಥಿಗಳ ಹೆಸರು ಭಾವಚಿತ್ರ ಸಮೇತ, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಮಾಧ್ಯಮ, ಪರೀಕ್ಷೆಗೆ ತೆಗೆದುಕೊಳ್ಳುವ ವಿಷಯಗಳು, ವಿದ್ಯಾರ್ಥಿಯ ವಿವರ ಮತ್ತು ಲಿಂಗದ ಸಂಪೂರ್ಣ ವಿವರಗಳು ಪ್ರವೇಶ ಪತ್ರದಲ್ಲಿ ಮುದ್ರಣವಾಗಿದ್ದು, ಸದರಿ ಮಾಹಿತಿಗಳಲ್ಲಿ ವಿದ್ಯಾರ್ಥಿ ಹೆಸರು, ತಂದೆ ತಾಯಿಯ ಹೆಸರು ಪೂರ್ಣ ಬದಲಾವಣೆ

ಇದ್ದಲ್ಲಿ ಹಾಗೂ ಜನ್ಮ ದಿನಾಂಕದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಎ.ಆರ್.ಇ (ಶಾಲಾ ದಾಖಲಾತಿ ವಹಿ) ಮತ್ತು ಉಪನಿರ್ದೇಶಕರು/ಕ್ಷೇತ್ರಶಿಕ್ಷಣಾಧಿಕಾರಿಗಳವರ ಜ್ಞಾಪನ ಪತ್ರವನ್ನು ಪರಿಶೀಲನಾ ಶಾಖೆಗೆ ಕಳುಹಿಸಿಕೊಡುವುದು. ಹೀಗೆ ತಿದ್ದುಪಡಿಗೆ ಕಳುಹಿಸಿದ ಪ್ರವೇಶ ಪತ್ರಗಳನ್ನು ಮಂಡಳಿಯಲ್ಲಿನ ದಾಖಲೆಗಳೊಂದಿಗೆ ಪರಿಶೀಲಿಸಿ ಸರಿಪಡಿಸಲಾಗುವುದು.

8. **ಪ್ರವೇಶ ಪತ್ರಗಳಲ್ಲಿನ ತಿದ್ದುಪಡಿಗಳನ್ನು ಜೆರಾಕ್ಸ್ ಪ್ರತಿಯಲ್ಲಿ ಕೆಂಪು ಶಾಯಿಯಲ್ಲಿಯೇ ದೃಢೀಕರಿಸಿ ಮಂಡಳಿಗೆ ಸಲ್ಲಿಸುವುದು.**

9. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ–1966ರ ಅಧ್ಯಾಯ–6 ನಿಯಮ–37(i)(ii)ರ ಅನ್ವಯ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ಶಾಲಾ ವಿದ್ಯಾರ್ಥಿಗಳು ಕನಿಷ್ಠ ಶೇಕಡ.75 ರಷ್ಟು ಹಾಜರಾತಿ ಹೊಂದುವುದು ಕಡ್ಡಾಯವಾಗಿರುತ್ತದೆ. ಶೇ.75 ರಷ್ಟು ಹಾಜರಾತಿಗೆ ಹದಿನೈದು ದಿನಗಳಿಗೆ ಮೀರದಂತೆ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಹಾಜರಾತಿ ಕೊರತೆಯನ್ನು ಸಕಾರಣಗಳಿದ್ದಲ್ಲಿ ಸಂಬಂಧಿಸಿದ ಶಾಲಾ ಮುಖ್ಯಸ್ಥರೇ ಸದರಿ ಹಾಜರಾತಿ ಕೊರತೆಯನ್ನು ಮನ್ನಾ ಮಾಡಿ ವಿದ್ಯಾರ್ಥಿಗೆ ಪ್ರವೇಶ ಪತ್ರ ವಿತರಿಸುವುದು. ಯಾವುದೇ ಪ್ರಕರಣದಲ್ಲಿ ಹಾಜರಾತಿ ಕೊರತೆಯು ಹದಿನೈದು ದಿನಗಳಿಗೆ ಮೀರಿ ಹಾಗೂ ಮೂವತ್ತು ದಿನಗಳಿಗೆ ಮೀರದೇ ಇರುವ ಹಾಜರಾತಿ ಕೊರತೆಯನ್ನು ಮನ್ನಾ ಮಾಡಲು ಸಕಾರಣಗಳಿದ್ದಲ್ಲಿ ಶಾಲಾ ಮುಖ್ಯಸ್ಥರು ದೃಢೀಕರಿಸಿ ಮಂಡಳಿಯ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಕಳುಹಿಸಿಕೊಡುವುದು.

   ಮಂಡಳಿಯಿಂದ ಸದರಿ ಹಾಜರಾತಿ ಕೊರತೆಯು ಮನ್ನಾ ಆದ ನಂತರ ಸಂಬಂಧಿಸಿದ ವಿದ್ಯಾರ್ಥಿಗೆ ಪ್ರವೇಶ ಪತ್ರ ವಿತರಿಸುವುದು. ಯಾವುದೇ ಪ್ರಕರಣದಲ್ಲಿ ಮೂವತ್ತು ದಿನಗಳಿಗಿಂತ ಹೆಚ್ಚು ದಿನಗಳ ಹಾಜರಾತಿ ಕೊರತೆ ಹೊಂದಿ ಪರೀಕ್ಷೆಗೆ ಕುಳಿತುಕೊಳ್ಳಲು ಅನರ್ಹರಾದ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಸಂಬಂಧಿಸಿದ ವಿದ್ಯಾರ್ಥಿಗೆ ವಿತರಣೆ ಮಾಡದೆ ಪ್ರವೇಶ ಪತ್ರದ ಮೇಲೆ ಶೇ.75ರ ಕನಿಷ್ಠ ಹಾಜರಾತಿಗೆ 30 ದಿನಗಳಿಗೂ ಮೀರಿ ಹಾಜರಾತಿ ಕೊರತೆ ಇರುತ್ತದೆಂದು ನಮೂದಿಸಿ ಅಂತಹ ಪ್ರವೇಶ ಪತ್ರಗಳನ್ನು ಶಾಲಾ ಮುಖ್ಯಸ್ಥರು ದೃಢೀಕರಿಸಿ ಪರೀಕ್ಷೆ ಪ್ರಾರಂಭವಾಗುವ ಮುನ್ನ ಮಂಡಳಿಗೆ ತಲುಪುವಂತೆ ಹಿಂದಿರುಗಿಸುವುದು ಕಡ್ಡಾಯವಾಗಿರುತ್ತದೆ.

   ಹಾಜರಾತಿ ಕೊರತೆಯಿರುವ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಗೆ ಹಿಂದಿರುಗಿಸುವಾಗ ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧ–23 ರಲ್ಲಿ ಕಡ್ಡಾಯವಾಗಿ ಮಾಹಿತಿ ಭರ್ತಿ ಮಾಡಿ ಸಂಬಂಧಿಸಿದ ಪರಿಶೀಲನಾ ಶಾಖೆಗಳಿಗೆ ಕಳುಹಿಸುವುದು.

10. ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪಾಸಾದ ವಿಷಯಕ್ಕೆ ಪರೀಕ್ಷೆ ಬರೆಯುವಂತೆ ಮುದ್ರಣವಾಗಿದ್ದಲ್ಲಿ ಪಾಸಾದ ಬಗ್ಗೆ ಚುಕ್ಕೆ ಗುರುತಿಲ್ಲದ ಫಲಿತಾಂಶ ಪಟ್ಟಿಯನ್ನು ಮುಖ್ಯಶಿಕ್ಷಕರು ದೃಢೀಕರಿಸಿ ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಶಾಖಾಧಿಕಾರಿಗಳಿಗೆ ಕಳುಹಿಸುವುದು. ಇಲ್ಲವಾದಲ್ಲಿ ವಿದ್ಯಾರ್ಥಿ ಫಲಿತಾಂಶ ಪ್ರಕಟಣೆ ವಿಳಂಬವಾಗುವುದು.

11. ಒಂದೇ ವಿದ್ಯಾರ್ಥಿಗೆ ಎರಡು ನೊಂದಣಿ ಸಂಖ್ಯೆಯ ಪ್ರವೇಶ ಪತ್ರಗಳು ಬಂದಿದ್ದಲ್ಲಿ ಒಂದನ್ನು ಉಳಿಸಿಕೊಂಡು ಮತ್ತೊಂದನ್ನು ರದ್ದುಪಡಿಸಿ ದೃಢೀಕರಿಸಿ ಸೂಕ್ತ ಷರಾದೊಂದಿಗೆ ಶಾಖಾಧಿಕಾರಿಗಳ ವಿಳಾಸಕ್ಕೆ ಹಿಂದಿರುಗಿಸುವುದು.

12. ಮಾರ್ಚ್/ಏಪ್ರಿಲ್ 2019ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಪ್ರತ್ಯೇಕವಾಗಿರುವುದರಿಂದ ಪ್ರಶ್ನೆ ಪತ್ರಿಕೆಯು ಕಾಗದದ ಹೊರಕವಚ ಹೊಂದಿದೆ. ಅಭ್ಯರ್ಥಿಗಳು ಸದರಿ ಕಾಗದ ಕವಚವನ್ನು ಬಲಭಾಗದಲ್ಲಿ ಸ್ಕೇಲ್‌ನಿಂದ ಬೇರ್ಪಡಿಸಿ ನಂತರ ಪ್ರಶ್ನೆಪತ್ರಿಕೆಯನ್ನು ಓದಬೇಕಾಗುತ್ತದೆ. ಆದ್ದರಿಂದ ಅಭ್ಯರ್ಥಿಗಳಿಗೆ ಪ್ರತಿ ಪರೀಕ್ಷಾ ದಿನದಂದು ಸ್ಕೇಲ್ ತರಲು ತಿಳಿಸುವುದು.

13. ಮಂಡಳಿಯ ಜಾಲತಾಣದಲ್ಲಿ ಡ್ರಾಫ್ಟ್ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ತಿದ್ದುಪಡಿಗಳಿದ್ದಲ್ಲಿ, ತಿದ್ದುಪಡಿ ಮಾಡಿಕೊಳ್ಳಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದ್ದರೂ, ತಿದ್ದುಪಡಿ ಮಾಡಿಕೊಳ್ಳದೆ ಇರುವುದರಿಂದ ಪ್ರತಿ ತಿದ್ದುಪಡಿಗೆ ರೂ.100/– ದಂಡ ಶುಲ್ಕದೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

**ಮಾರ್ಚ್/ಏಪ್ರಿಲ್–2019ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ತಿದ್ದುಪಡಿ ಮಾಡಬೇಕಾಗಿರುವ ಪ್ರವೇಶ ಪತ್ರಗಳ ಪ್ರತಿಗಳನ್ನು ರವಾನಿಸಬೇಕಾದ ಅಧಿಕಾರಿಗಳ ಹೆಸರು ಮತ್ತು ಸಂಬಂಧಿಸಿದ ಜಿಲ್ಲೆಗಳ ಮಾಹಿತಿ.**

| ಕ್ರ ಸಂ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ | ಕಛೇರಿಯ ದೂರವಾಣಿ |
|---|---|---|---|---|---|
| 1 | ಎಫ್ | ಚಂದ್ರಕಾಂತಮ್ಮ ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ | 8971124869 | 08023345579 / 08023344676 |
| 2 | ಜಿ | ಎಂ.ವಿ.ಕುಮಾರಿ ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ | 8762404243 | 08023345579 / 08023344676 |
| 3 | ಹೆಚ್ | ಎಂ.ಎನ್.ಶ್ರೀನಿವಾಸ್ ಸಹಾಯಕ ನಿರ್ದೇಶಕರು | ಚಿತ್ರದುರ್ಗ/ದಾವಣಗೆರೆ/ಬೆಂಗಳೂರು ಗ್ರಾಮಾಂತರ/ರಾಮನಗರ | 9449052591 | 08023345579 / 08023344676 |

| | | | | | |
|---|---|---|---|---|---|
| 4 | ಐ | ಎಂ.ಜಿ.ಜಯಪ್ರಕಾಶ್, ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9845401773 | 08023345579 / 08023344676 |
| 5 | ಜೆ | ಭಾಗ್ಯವತಮ್ಮ ಸಹಾಯಕ ನಿರ್ದೇಶಕರು | ಮೈಸೂರು/ ಹಾಸನ/ ಚಿಕ್ಕಮಗಳೂರು/ ಕೊಡಗು | 9449812887 | 08023345579 / 08023344676 |
| 6 | ಕೆ | ಸೀತಾಲಕ್ಷ್ಮೀ, ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ | 9480590754 | 08023345579 / 08023344676 |
| 7 | ಎಲ್ | ಚಂದ್ರಕಾಂತಮ್ಮ, ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 8971124869 | 08023345579 / 08023344676 |
| 8 | ಎಂ | ಕೆ.ಎನ್.ನಾಗರಾಜು, ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ ರಾಯಚೂರು | 9019242936 | 08023345579 / 08023344676 |
| 9 | ಎನ್ | ಕೆ.ಎನ್.ನಾಗರಾಜು, ಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 9019242936 | 08023345579 / 08023344676 |

ಈ ಮೇಲ್ಕಂಡ ಅಂಶಗಳಂತೆ ನಿಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆದ್ಯತೆ ಮೇರೆಗೆ ಕಡ್ಡಾಯವಾಗಿ ಪರಿಶೀಲಿಸಿ, ತಿದ್ದುಪಡಿಗಳಿದ್ದಲ್ಲಿ ಪಟ್ಟಿ ಮಾಡಿ ನಮೂದಿಸಿ, ಸದರಿ ಪ್ರವೇಶ ಪತ್ರಗಳನ್ನು ಸರಿಪಡಿಸಲು ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಮಂಡಳಿಯ ಪರಿಶೀಲನಾಧಿಕಾರಿಗಳಿಗೆ ದಂಡ ಶುಲ್ಕದೊಂದಿಗೆ ದಿನಾಂಕ:21.02.2019ರ ಒಳಗೆ ತಲುಪುವಂತೆ ಪ್ರಸ್ತಾವನೆಯನ್ನು ಕಳುಹಿಸಿ ಕೊಡತಕ್ಕದ್ದು. ನಂತರ ತಿದ್ದುಪಡಿಗಾಗಿ ಬಂದ ಯಾವುದೇ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ತಿದ್ದುಪಡಿಗೆ ಅರ್ಹವಾದ ಪ್ರವೇಶ ಪತ್ರಗಳನ್ನು ಸೂಕ್ತ ತಿದ್ದುಪಡಿ ಮಾಡಿ, ಪರಿಷ್ಕೃತ ಪ್ರವೇಶ ಪತ್ರಗಳನ್ನು ಮಂಡಳಿಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗುವುದು.

(ವಿ ಸುಮಂಗಲ) 15/2/19
ನಿರ್ದೇಶಕರು ಪರೀಕ್ಷೆಗಳು

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ)ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಂದಿನ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಪ್ರೌಢ ಶಾಲಾ ಮುಖ್ಯಶಿಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ
6. ಶಾಖಾಧಿಕಾರಿಗಳು, ಬಿ ಶಾಖೆಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
7. ಶಾಖಾಧಿಕಾರಿಗಳು ಗಣಕ ಶಾಖೆ ಇವರು ಈ ಸುತ್ತೋಲೆಯನ್ನು ಮಂಡಳಿಯ ಅಂತರ್‌ಜಾಲದಲ್ಲಿ ಪ್ರಕಟಿಸುವುದು ಮತ್ತು ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಇಮೇಲ್‌ಗೆ ಕಳುಹಿಸುವುದು.
8. ನಿರ್ದೇಶಕರು / ಕಾರ್ಯದರ್ಶಿಗಳ ಆಪ್ತ ಶಾಖೆಯ ಮಾಹಿತಿಗಾಗಿ,
9. ಮಂಡಳಿಯ ಎಲ್ಲಾ ಶಾಖಾಧಿಕಾರಿಗಳು ಮತ್ತು ಅಧೀಕ್ಷಕರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
10. ಕಛೇರಿ ಪತ್ರಿ.

**ಪ್ರತಿಯನ್ನು ಗೌರವಪೂರ್ವಕವಾಗಿ :-**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರುರವರಿಗೆ ಸಲ್ಲಿಸಿದೆ.

## ಪ್ರವೇಶ ಪತ್ರ ತಿದ್ದುಪಡಿಗಾಗಿ ಮುಖ್ಯಸ್ಥರುಗಳು ಕಡ್ಡಾಯವಾಗಿ ಪರೀಕ್ಷಿಸಿಕೊಳ್ಳಬೇಕಾದ ಮುಖ್ಯಾಂಶಗಳು

1. ಪ್ರಸ್ತಾವನೆಯಲ್ಲಿ ಸಲ್ಲಿಸಿರುವಂತೆ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಪತ್ರಗಳು ಬಂದಿರುತ್ತವೆಯೇ?
2. ವಿದ್ಯಾರ್ಥಿ/ತಂದೆ/ತಾಯಿ ಇವರುಗಳ ಹೆಸರುಗಳಲ್ಲಿ Spelling Mistakes ಇದೆಯೇ? Initials ಗಳಿಗೆ ನೀಡಿರುವ Space ಸರಿ ಇದೆಯೇ?
3. ಜನ್ಮ ದಿನಾಂಕ, ಲಿಂಗ, ದೈಹಿಕ ಸ್ಥಿತಿ, ಮಾಧ್ಯಮ, ಭಾಷಾ ಸಂಯೋಜನೆ ಸರಿಯಾಗಿ ಮುದ್ರಣವಾಗಿದೆಯೇ?
4. ಮಾಧ್ಯಮಗಳು: K-ಕನ್ನಡ, E-ಆಂಗ್ಲ, L-ತೆಲುಗು, H-ಹಿಂದಿ, M-ಮರಾಠಿ, T-ತಮಿಳು, U-ಉರ್ದು, ಕೋರ್ ವಿಷಯಗಳ ಸಂಕೇತದ ಮುಂದೆ ಮುದ್ರಿತವಾಗಿದೆಯೇ?
5. CWSN ಮಕ್ಕಳಿಗೆ ಭಾಷಾ ವಿನಾಯಿತಿ ಹಾಗೂ ಇತರೆ ಸೌಲಭ್ಯಗಳು ಪಡೆದ ಬಗ್ಗೆ ಕ್ರಮವಾಗಿ ಮುದ್ರಿತವಾಗಿದೆಯೇ?
6. ಪುನರಾವರ್ತಿತ ಅಭ್ಯರ್ಥಿಯಾಗಿದ್ದಲ್ಲಿ, ಪರೀಕ್ಷೆಗೆ ಕುಳಿತುಕೊಳ್ಳುವ ವಿಷಯಗಳ ಆಯ್ಕೆ ಮತ್ತು ಪರೀಕ್ಷೆ ನಡೆಯುವ ದಿನಾಂಕ, ಸಮಯ ಸರಿಯಾಗಿ ಮುದ್ರಣವಾಗಿದೆಯೇ?
7. ಪರೀಕ್ಷಾ ಕೇಂದ್ರದ ಸಂಕೇತ ಮತ್ತು ವಿಳಾಸ ಸರಿಯಾಗಿದೆಯೇ ಪರೀಕ್ಷಿಸಿಕೊಳ್ಳಿ,
8. ಶಾಲಾ ಸಂಕೇತ ಕ್ರಮವಾಗಿ ಮುದ್ರಿತವಾಗಿದೆಯೇ?
9. ಭಾವಚಿತ್ರಗಳು ಕ್ರಮವಾಗಿ ಮುದ್ರಣವಾಗಿದೆಯೇ ಪರೀಕ್ಷಿಸಿಕೊಳ್ಳಿ.
10. ತಿದ್ದುಪಡಿಗಳಿದ್ದಲ್ಲಿ ಪ್ರವೇಶ ಪತ್ರಗಳನ್ನು ಜೆರಾಕ್ಸ್ ಮಾಡಿ ದೃಢೀಕರಿಸಿ ಕಳುಹಿಸುವುದು.
11. ಅಭ್ಯರ್ಥಿಗಳಿಗೆ ಪ್ರತಿ ಪರೀಕ್ಷಾ ದಿನದಂದು ಸ್ಕೇಲ್ ತರಲು ತಿಳಿಸುವುದು.

**ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ – – – – ನಿಮ್ಮಗಳ ಸಹಕಾರ ಅಗತ್ಯ**

**ದೂರವಾಣಿ ಸಂಖ್ಯೆಗಳು**

ನಿರ್ದೇಶಕರು ಪರೀಕ್ಷೆಗಳು : 080–23349434
ಕಾರ್ಯದರ್ಶಿಗಳು : 080–23445579
ಉಪನಿರ್ದೇಶಕರು(ಆಡಳಿತ) : 080–23562267
ಫ್ಯಾಕ್ಸ್ : 080–23347670

## ಅನುಬಂಧ – 23

# ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಗೆ ಹಿಂದಿರುಗಿಸುವ ಬಗ್ಗೆ

| ಕ್ರ. ಸಂ. | ಶಾಲಾ ಸಂಕೇತ | ನೋಂದಣಿ ಸಂಖ್ಯೆ | ವಿದ್ಯಾರ್ಥಿ ಹೆಸರು | ಶಾಲೆ ನಡೆದ ದಿನಗಳ ಸಂಖ್ಯೆ | ಹಾಜರಾದ ದಿನಗಳ ಸಂಖ್ಯೆ | ಶೇ. ಹಾಜರಾತಿ |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |

ಮೇಲೆ ತಿಳಿಸಿರುವ ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆ ಇರುವುದರಿಂದ ಮಂಡಳಿ ಕಾಯ್ದೆ 1966 ಚಾಪ್ಟರ್ VI ನಿಯಮ 37(2)(i)ರ ಪ್ರಕಾರ ಈ ಮೂಲಕ ಮೂಲ ಪ್ರವೇಶ ಪತ್ರಗಳನ್ನು ಕೆಂಪು ಶಾಹಿಯಲ್ಲಿ ಷರಾ ನಮೂದಿಸಿ ಹಿಂದಿರುಗಿಸುತ್ತಿದ್ದೇನೆ. ಈ ವಿದ್ಯಾರ್ಥಿಗಳ ಪಾಲಕರಿಗೆ ಆಗಿಂದಾಗ್ಗೆ ಮಾಹಿತಿ ನೀಡಿದಾಗ್ಯೂ ವಿದ್ಯಾರ್ಥಿಗಳು ದೀರ್ಘಕಾಲ ಗೈರುಹಾಜರಾಗಿರುತ್ತಾರೆಂದು ಈ ಮೂಲಕ ದೃಢೀಕರಿಸುತ್ತೇನೆ.

*ಮುಖ್ಯ ಶಿಕ್ಷಕರ ಸಹಿ ಮೊಹರಿನೊಂದಿಗೆ*